ಮಂತ್ರಿಗಳಿಗೆ ಕಾಗದ ಬರೆಯಲಾಗಿದೆ. ಊಟಿ ಕಂಪೆನಿಯು ರಾ ಮೇಟರಿಯಲ್ಸ್ ಉತ್ಪತ್ತಿ ಮಾಡುವುದನ್ನು ಕಳೆದ ವರ್ಷ ಹೆಚ್ಚು ಹೆಗೆದುಕೊಳ್ಳಲು ಅವಕಾಶವಾಗಿಲ್ಲ ಉತ್ಪತ್ತಿಯಾಗುವುದನ್ನು ಪೂರ್ಣವಾಗಿ ಉಪಯೋಗಮಾಡುವ ಬಗ್ಗೆ ಕೇಂದ್ರದ ಮಂತ್ರಿಗಳಾದ ಶ್ರೀ ಸುಬ್ರಹ್ಮಣ್ಯಂರವರು ಭರವಸೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ನಷ್ಟ ತಪ್ಪಿಸುವುದಕ್ಕೆ ಎಡಡು ಮೂರು ಯೋಜನೆಗಳಿವೆ ಎಂದು ಹೇಳಿದರು. ಅವು ಯಾವುವು ?

ಶ್ರೀ ಎಸ್. ಎಂ. ಕೃಷ್ಣ :-ಫಿಲ್ಟರ್ ಟಿಪ್ಸ್‌ಟು ಸಿಗರೇಟ್ ಇದಕ್ಕೆ ಕಾರ್ಖಾನೆಯಲ್ಲಿ ತಯಾರಾಗುವ ರಾಮೆಟೀರಿಯಲ್ಸ್ ಉಪಯೋಗ ಮಾಡಬೇಕು ಎಂಬುದೊಂದು. ಇನ್ನೊಂದು ಅಸಿಟೇಟ್ ಷೀಟ್ ಅಂಡ್ ಯೂರ್ನಗೆ ಉಪಯೋಗ ಮಾಡಬೇಕೆಂಬುದು.

ಶ್ರೀ ಕಾಗೋಡು ತಿಮ್ಮಪ್ಪ :—ಈ ಕಾರ್ಖಾನೆಯಲ್ಲಿ ನಷ್ಟವಾಗುತ್ತಿದ್ದರೂ ಕೂಡ ಮ್ಯಾನೇಜಿಂಗ್ ಡೈರೆಕ್ಟರು ಹೆಚ್ಚು ಟಿ ಎ ಮತ್ತು ಡಿ ಎ ಪಡೆದಿರುತ್ತಾರೆ. ಇದಕ್ಕೆ ಅವಕಾಶವಿಲ್ಲದಂತೆ ತಪ್ಪಿಸುವಿರಾ ?

ಶ್ರೀ ಎಸ್. ಎಂ. ಕೃಷ್ಣ :—ಮ್ಯಾನೇಜಿಂಗ್ ಡೈರೆಕ್ಟರುಸೇಲ್ಸ್ ಪ್ರಮೋಷನ್ ವಗೈರೆ ಬೇರೆ ಕೆಲಸಗಳಿಗೂ ಕೂಡ ಗಮನ ಕೊಡಬೇಕಾಗಿದೆ. ದೆಹಲಿ, ಬೊಂಬಾಯಿ ಮುಂತಾದ ಕಡೆಗಳಿಗೆ ಹೋಗಿ ಬರಬೇಕಾಗಿದೆ. ಈಗ ಐ ಎ ಎಸ್ ಅಫೀಸರನ್ನು ಈ ಕೆಲಸಕ್ಕೆ ನೇಮಕ ಮಾಡಿದರೆ ಪ್ರಯೋಜನವಿಲ್ಲ, ಟೆಕ್ನೋಕ್ರ್ಯಾಟ್ ಒಬ್ಬರನ್ನು ನೇಮಿಸಿದರೆ ಭವಿಷ್ಯ ಉತ್ತಮವಾಗಬಹುದು ಎಂದು ಯೋಚಿಸಿ ಅದರಂತೆ ವ್ಯಾಡಿದ್ದೇವೆ. ಕಳೆದ 9 ತಿಂಗಳಿಂದ ಹಾಗೆ ಮಾಡಿದಮೇಲೆ ಪರಿಸ್ಥಿತಿ ಸುಧಾರಿಸಿದೆ.

GOVERNMENT YARN DEPOTS IN GULBARGA DISTRICT.

242. SRI BAPU GOWDA RAYAPPA (Shahapur)—

Will the Minister for Industries be pleased to state :—

(*a*) the number of Government Yarn Depots opened in Gulbarga District.

(*b*) the amount invested in each depot (Depotwise information may be given.);

Sri Bapu Gowda Rayappa

(*c*) whether individual persons have been appointed as retail dealer to distribute yarn in Alland, Shahapur and Shorapur Taluks ;

(*d*) if so, the names of such persons ?

SRI S. M. KRISHNA (Minister for Industries):—

(*a*) Two 1. Alland.
1. Gurmitkal

(*b*) Rs. 4-50 lakhs for purchase of yarn and Rs. 0.50 lakhs towards recurring expenditure on the staff, rent, etc., for each Depot.

(*c*) Yes

(*d*) 1. Sri B. R. Chillal, Alland

2. Sri Pampangoud and Shankarappa Tangadgi (Shahapur Taluk), Gogi

3. Sri M.H. Waheed Chowdhri, Shorapur Taluk. Rangampet, Gulbarga District.

ಶ್ರೀ ಬಾಪೂಗೌಡ ರಾಯಪ್ಪ : (ಬಿ) ಪ್ರಶ್ನೆಗೆ ಉತ್ತರವಾಗಿ ಆಳಂದ್ ಮತ್ತು ಗುರುಮಿಟ್‌ಕಲ್ ಈ ಎರಡು ಸರ್ಕಾರಿ ನೂಲು ಭಂಡಾರಗಳಿಗೂ ಒದಗಿಸಿದ ನೂಲಿನ ಮೊತ್ತವೆಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ : ಸಧ್ಯಕ್ಕೆ ನನ್ನ ಬಳಿ ಇರತಕ್ಕ ರೆಕಾರ್ಡಿನಲ್ಲಿ ಆ ಸಂಖ್ಯೆ ಇಲ್ಲ ಆದರೆ ಎಷ್ಟು ಮೊತ್ತದ ನೂಲನ್ನು ಒದಗಿಸಲಾಗಿದೆ ಎಂಬುದನ್ನು ತಿಳಿಸಬಲ್ಲೆ. ಆಲಂದಿಗೆ ಒದಗಿಸಿದ ನೂಲಿನ ಮೊತ್ತ 2 ಲಕ್ಷ 36 ಸಾವಿರದ 782 ರೂಪಾಯಿಗಳು ; ಅಲ್ಲಿ ಬಿಕರಿಯಾಗಿರತಕ್ಕ ನೂಲಿನ ಮೊತ್ತ : 1 ಲಕ್ಷ 79 ಸಾವಿರದ 937 ರೂಪಾಯಿಗಳು. ಇನ್ನು ಗುರುಮಿಟ್‌ಕಲ್ಲಿಗೆ ಒದಗಿಸಿದ ನೂಲಿನ ಮೊತ್ತ : 2 ಲಕ್ಷ 64 ಸಾವಿರದ 424 ರೂಪಾಯಿಗಳು. ಅಲ್ಲಿ ಬಿಕರಿಯಾಗಿರತಕ್ಕ ನೂಲಿನ ಮೊತ್ತ 1 ಲಕ್ಷ 91 ಸಾವಿರದ 755 ರೂಪಾಯಿಗಳು.

1-30 P.M.

ಶ್ರೀ ಬಾಪೂಗೌಡ ರಾಯಪ್ಪ : ಅಲ್ಲಿ ಕಲ್ಲು ಬುರ್ಗಿ ಒಂದರಲ್ಲೇ 6 ಸಾವಿರ ಮಗ್ಗಗಳಿವೆ ಎಂದಾಗ ತಾವು ಅಲ್ಲಿಗೆ ಸರಬರಾಯಿ ಮಾಡಿರತಕ್ಕ ನೂಲಿನ ಪ್ರಮಾಣ ಬಹಳ ಕಡಿಮೆಯಲ್ಲವೆ ?

ಶ್ರೀ ಎಸ್. ಎಂ. ಕೃಷ್ಣ : ನೂಲಿನ ಅಭಾವ ಇರತಕ್ಕ ಕಾಲದಲ್ಲಿ ಇಷ್ಟಾ ದರೂ ಅಲ್ಲಿಗೆ ಒದಗಿಸುವುದಕ್ಕೆ ಸಾಧ್ಯವಾಯಿತು ಅನ್ನುವ ಸಮಾಧಾನ ಸರ್ಕಾರಕ್ಕಿದೆ.

ಶ್ರೀ ಪಿ. ಎಂ. ಬಾಂಗಿ : ಇಲ್ಲಿ ಉತ್ತರದಲ್ಲಿ ನಾಲ್ಕುವರೆ ಲಕ್ಷ ರೂಪಾಯಿ ಗಳನ್ನು ನೂಲನ್ನು ಕೊಳ್ಳುವುದಕ್ಕೂ ಮತ್ತು 50 ಲಕ್ಷ ರೂಪಾಯಿಗಳನ್ನು ಶಿಬ್ಬಂದಿ ಬಾಡಿಗೆ ವಗ್ಗೈರೆಗಳಿಗೆ ಕೊಟ್ಟಿದೆ ಎಂದು ತಿಳಿಸಲಾಗಿದೆ. ಆದರೆ ಈ 50 ಲಕ್ಷ ರೂಪಾಯಿಗಳನ್ನು ಅಂದರೆ ಶಿಬ್ಬಂದಿ ಮತ್ತೆ ಬಾಡಿಗೆ ಬಗ್ಗೆ ಮಾಡಿರತಕ್ಕ ಖರ್ಚನ್ನು ನೂಲನ್ನು ಮಾರತಕ್ಕ ಕಾಲದಲ್ಲಿ ಇದನ್ನು ಸೇರಿಸಿ ಮಾರಾಟ ಮಾಡುವುದಿಲ್ಲವೇ?

ಶ್ರೀ ಎಸ್. ಎಂ. ಕೃಷ್ಣ : ಸೇರಿಸೇ ಮಾರಾಟ ಮಾಡುತ್ತಾರೆ.

SRI RAJA PID NAIK : May I know what is the criteria to appoint individvals as sub agents, since none of the three persons mentioned here are either weavers or they have any knowledge of the same ?

SRI S. M. KRISHNA : We took a broad policy decision that only co-operatives which have to do something with the weavers alone are to be appointed as dealers. But unfortunately, in our State co-operative movement particularly in the weaving sector has not been build up on sound lines in my opinion, and thereafter wherever the weavers' co-operative societies do not have sound financial basis there inevitably we had to depend upon individual dealers and appoint them as agents on the recommendation of the Deputy Commissioner of the Districts concerned.

SRI M. S. KRISHNAN : Since there are serious complaints both in this House and outside that yarn is being sold in blackmarket and the same is not being distributed properly, what guarantees are there in respect of these private people who have been appointed as dealers ?

SRI S. M. KRISHNA : The Divisional Commissioner and the Deputy Commissioner have been asked to keep a close watch on the activities of these dealers including

the co-operatives. Whenever instances of misuse of yarn or sale of yarn in blackmarket is brought to our notice we will certainly taken action.

ಶ್ರೀ ಪಿ. ಎಂ. ಬಂಗಿ :—ಅಲಂದಿನಲ್ಲಿ ಸರ್ಕಾರಿ ನೂಲಿನ ಡಿಪೋ ಇದ್ದಾಗ್ಗೂ ಮತ್ತು ಅಲ್ಲಿನೇಕಾರರಿಗೆ ನೂಲನ್ನು ಕೊಳ್ಳುವುದಕ್ಕೆ ರೇಷನ್ ಕಾರ್ಡುಗಳನ್ನು ಹಂಚಿದ್ದರೂ ಅಲ್ಲಿಗೆ ಶ್ರೀ ಬಿ. ಆರ್. ಚಿಲ್ಲಾಳ್ ಅನ್ನತಕ್ಕವರನ್ನು ಯಾವ ಕಾರಣಕ್ಕಾಗಿ ನೇಮಿಸಿದಿರಿ ?

ಶ್ರೀ ಎಸ್. ಎಂ. ಕೃಷ್ಣ :—ಅವರನ್ನು ಅಲ್ಲಿ ಈ ನೂಲಿನ ಕಂಟ್ರೋಲ್ ಆಫೀಸ್ಗೆ ಬರುವುದಕ್ಕೆ ಮೊದಲೇ ನೇಮಕ ಮಾಡಲಾಗಿತ್ತು. ಆದರೆ ಇತ್ತೀಚೆಗೆ ಅವರಿಗೆ ನೂಲನ್ನು ಕೊಟ್ಟಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ :—ಷಹಪೂರ್ ಮತ್ತು ಗುರುಮಿಟ್ಕಲ್ ಹಾಗೂ ಪೊರಾಪುರಗಳಲ್ಲಿ ನೂಲಿನ ಹಂಚಿಕೆಗಾಗಿ ಸಹಕಾರ ಸಂಘಗಳಿದ್ದಾಗ್ಗೂ ಅಲ್ಲಿ ಈ ಪಂಪನಗೌಡ ಮತ್ತು ವಹೀದ್ ಜಾಧುರಿ ವಗೈರೆಯವರನ್ನು ಏಜಂಟರನ್ನಾಗಿ ನೇಮಕ ಮಾಡುವುದಕ್ಕೆ ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ :—ಅಲ್ಲಿ ಕೋ ಅಪರೇಟಿವ್ ಸೊಸೈಟಿಗಳಿಲ್ಲ ಎಂದು ನಾನು ಹೇಳಲಿಲ್ಲ. ಕೆಲವು ಸಂದರ್ಭಗಳಲ್ಲಿ ಈ ಸಹಕಾರ ಸಂಘಗಳಲ್ಲಿ ನೂಲನ್ನು ಕೊಳ್ಳುವುದಕ್ಕೆ ಬಂಡವಾಳವೇ ಇರುವುದಿಲ್ಲ. ಇಂಥ ಕೆಲವು ಕಠಿಣ ಪರಿಸ್ಥಿತಿಗಳೂ ಇರುವುದರಿಂದ ಕೆಲವು ಸಂದರ್ಭಗಳಲ್ಲಿ ಪ್ರೈವೇಟ್ ಏಜನ್ಸಿಗಳಿಗೆ ಕೊಡಬೇಕಾಗುತ್ತದೆ. ಆದರೆ ಈ ವ್ಯಕ್ತಿಗಳ ಇತಿಹಾಸ ನನಗೆ ಗೊತ್ತಿಲ್ಲ. ಇವರನ್ನು ಅಲ್ಲಿನ ಡಿವಿಜನ್ ಕಮಿಷನರ್ ಹಾಗೂ ಜಿಲ್ಲಾಧಿಕಾರಿಗಳ ಶಿಫಾರಸಿನ ಮೇಲೆ ನೇಮಕ ಮಾಡಿದೆ. ಅವರ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ತಿಳಿಸಿ ವಿಚಾರಣೆ ಮಾಡಲಾಗುತ್ತದೆ.

ಶ್ರೀ ಬಾಪೂಗೌಡ ರಾಯಪ್ಪ :—ಈ ಏಜಂಟರನ್ನು ಸರ್ಕಾರ ಅವರ ಶಿಫಾರಸಿನ ಮೇಲೆ ನೇಮಕ ಮಾಡಲಿಲ್ಲ. ತಾವೇ ಇಲ್ಲಿಂದ ನಾಮಿನೇಟ್ ಮಾಡಿ ಈ ಹೆಸರನ್ನು ಕಳುಹಿಸಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ :—ಅದನ್ನು ವಿಚಾರ ಮಾಡಿ ಹೇಳುತ್ತೇನೆ